*ನೂಪುರ ಭ್ರಮರಿ ಪ್ರತಿಷ್ಠಾನ(ರಿ.)*
**'ಸಾನ್ನಿಧ್ಯ', ದೇಚೂರು ರಸ್ತೆ, ಅಶ್ವತ್ಥಕಟ್ಟೆ ಹತ್ತಿರ, ಮಡಿಕೇರಿ, ಕೊಡಗು 571201.**

# ನೃತ್ಯ ಸಂಶೋಧಕರ ಒಕ್ಕೂಟ

ನೃತ್ಯಸಂಸ್ಕೃತಿಗೆ ಸಂಬಂಧಿಸಿದಂತೆ ವಸ್ತುನಿಷ್ಠ ಅಧ್ಯಯನ, ಕ್ರಮಬದ್ಧವಾದ ಸಂಶೋಧನಾಕ್ರಮ ಮತ್ತು ಅವಕಾಶಗಳಿಗಾಗಿ ನೂಪುರ ಭ್ರಮರಿ ಪ್ರತಿಷ್ಠಾನವು 'ನೃತ್ಯ ಸಂಶೋಧಕರ ಒಕ್ಕೂಟ' ಎಂಬ ಸಂಶೋಧನೆಗೆ ಮೀಸಲಾದ ಸಂಸ್ಥೆಯನ್ನು ಆರಂಭಿಸಿದೆ. ಫೆಬ್ರವರಿ 20, 2012ರಂದು ( ಮಹಾಶಿವರಾತ್ರಿ) ಬೆಂಗಳೂರಿನ ನಯನ ಸಭಾಂಗಣದಲ್ಲಿ ವಿಧ್ಯುಕ್ತವಾಗಿ ಉದ್ಘಾಟನೆ. ನೃತ್ಯ ಕ್ಷೇತ್ರದಲ್ಲಿನ ಸಮಸ್ಯೆಗಳು, ಸಂಶೋಧನಾ ಕ್ಷೇತ್ರದ ಸವಾಲುಗಳು, ಜವಾಬ್ದಾರಿಗಳನ್ನು ಕಂಡುಕೊಂಡು ಅದಕ್ಕೆ ಸೂಕ್ತ ಪರಿಹಾರೋಪಾಯಗಳನ್ನು, ಕರ್ತವ್ಯಗಳನ್ನು ರೂಪಿಸಿಕೊಳ್ಳುವ ಯೋಜನೆಗಾಗಿ ಮೈತಳೆದ ಒಂದಷ್ಟು ವರುಷದ ಚಿಂತನ-ಮಂಥನದ ಫಲವೇ ಈ ಒಕ್ಕೂಟ. ಆಸಕ್ತ ಸಂಶೋಧಕರು/ ವಿದ್ಯಾರ್ಥಿಗಳು ಈ ಒಕ್ಕೂಟದ ಸದಸ್ಯರಾಗುವುದರೊಂದಿಗೆ ಭವಿಷ್ಯದ ಹಲವು ಸಂಶೋಧನಾ ಕರ್ತವ್ಯಗಳನ್ನು ಸಸೂತ್ರವಾಗಿ ಮುನ್ನಡೆಸಿಕೊಂಡು ಹೋಗುವಲ್ಲಿ ಸಹಕಾರ ಪಡೆಯಬಹುದಾಗಿದೆ.

**ಒಕ್ಕೂಟದ ಆಶಯಗಳು**

- ಒಕ್ಕೂಟಕ್ಕೆ ಯಾವುದೇ ಭಾಷಾ, ಭೌಗೋಳಿಕ ಮಿತಿಗಳಿರುವುದಿಲ್ಲ. ಕಾರ್ಯವಾಪ್ತಿ ವಿಸ್ತಾರವಾಗಿರುತ್ತದೆ. ನವೀನ, ಸ್ವಸಂಶೋಧಿತ ಸಂಶೋಧನೆಗಳನ್ನು ಸ್ವಾಗತಿಸುವುದು, ಅವಕಾಶ ನೀಡುವುದು ಧ್ಯೇಯಗಳಲ್ಲೊಂದು. ಚರ್ವಿತ ಚರ್ವಣವೆನಿಸುವ ಯಾವುದೇ ವಿಷಯ ಪ್ರಸ್ತುತಿಗೆ ಅವಕಾಶವಿಲ್ಲ. ನೃತ್ಯಕ್ಕೆ ಸಂಬಂಧಿಸಿದಂತೆ ಸಂಶೋಧಕರನ್ನು ಒಗ್ಗೂಡಿಸುವುದು ಮತ್ತು ಪರಸ್ಪರ ಸೌಹಾರ್ದ ಬಾಂಧವ್ಯದ ನಿರೂಪಣೆ ಮುಖ್ಯ ಉದ್ದೇಶ. ಈ ನೆಲೆಯಲ್ಲಿ ಈ ಒಕ್ಕೂಟದ್ದು ಶೋಧದ, ಸಂಚಯದ ಶೈಕ್ಷಣಿಕ ಹಾದಿ.
- ಯುವ ಸಂಶೋಧಕರು ಮತ್ತು ಯುವಜನತೆಯಲ್ಲಿ ಸೂಕ್ತ ಸಂಶೋಧನಾ ದಿಕ್ಕು, ಮಾದರಿಗಳ ನಿರ್ಮಿತಿಯು ಒಕ್ಕೂಟದ ಪ್ರಧಾನ ಲಕ್ಷ್ಯ. ಆದ್ದರಿಂದ ಹಿರಿತನಕ್ಕೆ ಗೌರವವಿರುವುದಾದರೂ ಅರಿವಿನ ಹಿರಿತನವೇ ಪ್ರಧಾನವಾದುದು. ಪದವಿ/ಪ್ರತಿಷ್ಠೆ/ವಯಸ್ಸಿನ ಅಡೆತಡೆಗಳಿಲ್ಲದೆ ಕಾಲಾನುಕಾಲವಾಗಿ ಸಂಶೋಧನೆಗೆ ಸಂಬಂಧಿಸಿದಂತೆ ಮುನ್ನಡೆಯುವುದು ಉದ್ದೇಶ.
- ಯಾವುದೇ ರಾಜಕೀಯ, ಮುಚ್ಚುಮರೆ, ಕಪೋಲಕಲ್ಪಿತ, ಗಾಸಿಪ್‌ನಂತಹ ಸುದ್ದಿ, ವಿಷಯ ವಿಶ್ಲೇಷಣೆಗಳಿಗೆ ಅವಕಾಶ ಕೊಡದೆ ಮುಕ್ತ, ಸಸ್ನೇಹಪೂರ್ಣ, ಕೌಟುಂಬಿಕ ಮನಸ್ಥಿತಿ ಮತ್ತು ನಡವಳಿಕೆಗಳನ್ನು ಒಕ್ಕೂಟದಲ್ಲಿ ಕಾಪಾಡಿಕೊಳ್ಳುವುದು.
- ಪ್ರಯೋಗ ಮತ್ತು ಸಿದ್ಧಾಂತಗಳ ನಡುವಿನ ಸಂಬಂಧವನ್ನು ಸ್ಪಷ್ಟಪಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ನೃತ್ಯಕ್ಕೆ ಪೂರಕವಾಗುವ ಸಂಗೀತ ಮತ್ತು ಇತರ ಲಲಿತ ಕಲೆಗಳ ಸಂಶೋಧನೆಗೆ ಸಂಬಂಧಿಸಿದ ಅಗತ್ಯ ಅನುಕೂಲಗಳನ್ನು ಕಲ್ಪಿಸುವುದು; ಮತ್ತು ನಿರ್ದಿಷ್ಟ ಮಾನದಂಡ, ದಿಕ್ಕನ್ನು ಕಂಡುಕೊಳ್ಳುವುದು.
- ವಾರ್ಷಿಕವಾಗಿ ಮತ್ತು ಸಂದರ್ಭೋಚಿತವಾದ ಸಭೆ-ಸಮಾರಂಭಗಳನ್ನು ನಡೆಸುವುದರೊಂದಿಗೆ ಸಂಪನ್ಮೂಲ ವ್ಯಕ್ತಿಗಳನ್ನು ಯೋಜಿಸಿಕೊಂಡು ಸಂಶೋಧನೆಯ ವಿವಿಧ ದಿಕ್ಕುಗಳಿಗೆ ಸಂಬಂಧಿಸಿದ ಹಲವು ಬಗೆಯ ಉಪನ್ಯಾಸ, ಕಮ್ಮಟ, ವಿಚಾರಸಂಕಿರಣ, ಕಾರ್ಯಾಗಾರ, ಪ್ರಾತ್ಯಕ್ಷಿಕೆ ಇತ್ಯಾದಿ ಕಾರ್ಯಕ್ರಮಗಳನ್ನು ಯಥೋಚಿತವಾಗಿ ನಿರ್ಧರಿತ ವಾರ್ಷಿಕ ನಿಯಮಾವಳಿಗಳನುಸಾರವಾಗಿ ನಡೆಸಿಕೊಂಡು ಬರುವುದು.
- ಪ್ರತಿವರ್ಷ ಮಹಾಶಿವರಾತ್ರಿಯ ಆಸುಪಾಸಿನ ದಿನಗಳಲ್ಲಿ ಆಯೋಜಿಸಲಾಗುವ ವಿಚಾರಸಂಕಿರಣದಲ್ಲಿ ಆದಷ್ಟು ಹೊಸ ಸಂಶೋಧಕರಿಗೆ, ಸಂಶೋಧನೆಗೆ, ಸಂಶೋಧನಾಧರಿತ ನೃತ್ಯಪ್ರಸ್ತುತಿ, ಪ್ರಾತ್ಯಕ್ಷಿಕೆಗಳಿಗೆ ಅವಕಾಶ ನೀಡಲಾಗುತ್ತದೆ. ಈ ಸಂದರ್ಭದಲ್ಲಿ ಮಂಡನೆಯಾದ ಸಂಶೋಧನಾ ಪ್ರಬಂಧಗಳನ್ನು ಸಂಕಲಿಸಿ ಸಂಶೋಧನಾ ನಿಯತಕಾಲಿಕೆಯನ್ನು ಯಥೋಚಿತವಾಗಿ ಪ್ರಕಟಿಸುವುದು ಮತ್ತು ಸೂಕ್ತ ಮಾದರಿಯಲ್ಲಿ ವೀಡಿಯೋ ಸಿಡಿ ರೂಪದಲ್ಲಿ ದಾಖಲಿಸುವುದು.
- ಅಸೋಸಿಯೇಷನ್ ಸದಸ್ಯರಾಗಲು ಸದಸ್ಯಧನ 1500/- ರೂ. ಸಮಯದ ಅನಿವಾರ್ಯತೆಯನ್ನು ಅವಲಂಬಿಸಿ ವಾರ್ಷಿಕವಾಗಿ ಮೊತ್ತವನ್ನು ಹೆಚ್ಚು ಅಥವಾ ಕಡಿಮೆ ಮಾಡುವುದು ಪ್ರಧಾನ ಸಮಿತಿಯ ಸರ್ವ ಸದಸ್ಯರ ಒಮ್ಮತದ ನಿರ್ಣಯಕ್ಕೆ ಬಿಟ್ಟದ್ದು. ಸದಸ್ಯರಿಗೆ ಕಾಲಾನುಕೂಲ ಮತ್ತು ಕಾರ್ಯಕ್ರಮದ ಸ್ವರೂಪದನ್ವಯ ವಿಶೇಷ ಸೌಲಭ್ಯ ಮತು ರಿಯಾಯ್ತಿಗಳಿರುತ್ತವೆ. ಸದಸ್ಯರಾದವರಿಗೆ ಸಂಶೋಧನಾ ಮಾರ್ಗದರ್ಶನಗಳನ್ನು ಪಡೆದುಕೊಳ್ಳಲು ಸಂಪನ್ಮೂಲ ವ್ಯಕ್ತಿಗಳ ಲಭ್ಯತೆಯೂ ಇದೆ. ಒಕ್ಕೂಟದ ಸದಸ್ಯರಿಗೆ ಮಾತೃಸಂಸ್ಥೆಯಾದ ನೂಪುರ ಭ್ರಮರಿ ಪ್ರತಿಷ್ಠಾನದ ಇತರೆ ಅಂಗಸಂಸ್ಥೆಗಳಾದ ನೂಪುರ ಭ್ರಮರಿ ಪತ್ರಿಕೆ, ಸಾನ್ನಿಧ್ಯ ಪ್ರಕಾಶನದ ನೆರವು ಗುಣಮಟ್ಟ, ಸಂದರ್ಭವನ್ನು ಅನುಲಕ್ಷಿಸಿ ಸಮಯೋಚಿತವಾಗಿ ಲಭ್ಯವಾಗುತ್ತದೆ.

**ಗೌರವ ಸಲಹೆಗಾರರು**

ಡಾ.ಶತಾವಧಾನಿ ಆರ್.ಗಣೇಶ್

ಡಾ.ಎಚ್.ಎಸ್.ಗೋಪಾಲ ರಾವ್

**ಒಕ್ಕೂಟದ ಪ್ರಧಾನ ಸಮಿತಿ**

ಮನೋರಮಾ ಬಿ.ಎನ್ ( ಮುಖ್ಯ ಸಂಚಾಲಕರು)

ಡಾ.ಕರುಣಾ ವಿಜಯೇಂದ್ರ

ಡಾ. ಶೋಭಾ ಶಶಿಕುಮಾರ್

ವಿಷ್ಣುಪ್ರಸಾದ್ ಎನ್.

ನಿವೇದಿತಾ ಶ್ರೀನಿವಾಸ್

ಶಾಲಿನಿ ವಿಠಲ್

ಪದ್ಮಿನಿ ಕುಮಾರ್

ಮುಂದಿನ ದಿನಗಳಲ್ಲಿ ಸಮಿತಿ ಮತ್ತು ಸಲಹೆಗಾರರ ಸಂಖ್ಯೆ ವಿಶಾಲವಾಗಲಿದೆ ಎಂಬುದು ನಮ್ಮ ಅಂಬೋಣ.